**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಬಸವನ-ಬಾಗೇವಾಡಿ**

**ಓ.ಎಸ್ ನಂ. 657/2019.**

**ಚಾ.ಸಾ-1**

**ಸಾಕ್ಷಿಗೆ ದಿನಾಂಕ 16.07.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿಯ ಹೆಸರು ಃ ಚಂದ್ರಶೇಖರ ಉಕ್ಕಲಿ

ಗಂಡನ ಹೆಸರು ಃ ಮಲ್ಲಪ್ಪ

ವಯಸ್ಸು ಃ 41 ವರ್ಷ

ಉದ್ಯೋಗ ಃ ಸರ್ವೆಯರ್

ವಾಸಸ್ಥಳ ಃ ಬಾಗಲಕೋಟ

**ಸಾಕ್ಷಿ ವಿಚಾರಣೆ ಃ-**

1. ನಾನು 2017 ರಿಂದ 2022 ರವರೆಗೆ ಬ.ಬಾಗೇವಾಡಿಯಲ್ಲಿ ಸಹಾಯಕ ನಿರ್ದೇಶಕ ಕಛೇರಿಯಲ್ಲಿ ಭೂ ಮಾಪಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನನಗೆ ನ್ಯಾಯಾಲಯದಿಂದ Sy.No.240 ಕ್ಕೆ ಸಂಬಂಧಿಸಿದಂತೆ ದಾಖಲಾತಿಯನ್ನು ಹಾಜರುಪಡಿಸಲು ಆದೇಶಿಸಿದಂತೆ ದಾಖಲಾತಿಯನ್ನು ಹಾಜರುಪಡಿಸುತ್ತಿದ್ದೇನೆ.

ಎ. ನೋಟಿಸ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ-1 ಎಂದು,

ಬಿ. ದೃಢಿಕೃತ ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ-2 ಮತ್ತು 3 ಎಂದು,

ಸಿ. ಮಹಜರ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ-4 ಎಂದು,

ಡಿ. ಕಚ್ಚಾ ನಾಕಾಶೆಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ-5 ಎಂದು,

ಇ. ಪಿ.ಟಿ. ಶೀಟನ್ನು ಹಾಜರುಪಡಿಸಿದ್ದು ಅದನ್ನು ನಿಸಿ-6 ಎಂದು ಗುರುತಿಸಲಾಯಿತು.

ಈ. ವರದಿಯನ್ನು ನಿಸಿ-7 ಎಂದು ಗುರುತಿಸಲಾಯಿತು.

**ಮುಖ್ಯ ವಿಚಾರಣೆಃ- ಶ್ರೀ. ಎನ್.ಎಸ್.ಕೆ. ವಕೀಲರಿಂದ**

3. ನಿಸಿ-6 ರಲ್ಲಿ ನಾನು ವರದಿ ನೀಡಿದ ಪ್ರಕಾರ ಪ್ರತಿವಾದಿಯು ಸರ್ವೆ ನಂ. 240 ರಲ್ಲಿ

ಲಾಗು ಸರ್ವೆ ನಂ.239 ರ ಕಬ್ಜಾದಾರರು 6 ಗುಂಟೆ ಒತ್ತುವರಿ ಮಾಡಿರುತ್ತಾರೆ ಎಂದು ವರದಿ ನೀಡಿರುತ್ತೇನೆ ಎಂದರೆ ಸರಿ. ಸದರಿ ಅಳತೆ ಪಹಣಿ ಪತ್ರಿಕೆಯ ಆಧಾರ ಮೇರೆಗೆ ಜರುಗಿಸಿರುತ್ತೇನೆ. ಸದರಿ ಒತ್ತುವರಿ ಆದ ಜಮೀನನ್ನು ನಕಾಶೆಯಲ್ಲಿ ತೋರಿಸಿರುತ್ತೇನೆ. ಸಾಕ್ಷಿ ಮುಂದುವರೆದು ಪ್ರತಿವಾದಿಯು ಸ್ಥಳದಲ್ಲಿ ಹದ್ದು ಬಸ್ತು ಗುರುತಿಸುವ ಸಮಯದಲ್ಲಿ ಮೌಖಿಕವಾಗಿ ತಕರಾರು ಮಾಡಿರುತ್ತಾರೆ.

**ಪಾಟೀ ಸವಾಲು ಪ್ರತಿವಾದಿಯು ಗೈರು ಹಾಜರಿದ್ದ ಕಾರಣ, ಪಾಟೀ ಸವಾಲು ಇಲ್ಲ ಎಂದು ತಗೆದುಕೊಳ್ಳಲಾಯಿತು.**

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ. ಅಮೀತ್ ಘಟ್ಟಿ )**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**